# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಯೋಜನಾ ಮಂಡಳಿ ಉಪಾಧ್ಯಕ್ಷರಿಗೆ ಆಪ್ತ ಸಿಬ್ಬಂದಿ ವರ್ಗವನ್ನು ಮಂಜೂರು ಮಾಡುವ ಬಗ್ಗೆ.

**ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 125 ಸಿಸನೇ 2002, ಬೆಂಗಳೂರು, ದಿನಾಂಕ: 27 – 11 – 2002.**

ಓದಲಾಗಿದೆ:
1) ಸರ್ಕಾರಿ ಅಧಿಸೂಚನೆ ಸಂಖ್ಯೆ ಸಿಆಸುಇ 77 ಸಿಸನ 2002, ದಿನಾಂಕ 04-07-2002.
2) ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 41 ಜಿಪಿಎಂ 2002, ದಿನಾಂಕ 17-06-2002.
3) ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ ಇವರ ಪತ್ರ ಸಂಖ್ಯೆ ಎಸ್‌ಪಿಬಿ:ಡಿವೈಸಿ:14:2002, ದಿನಾಂಕ 19-08-2002.

ಪ್ರಸ್ತಾವನೆ:

ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರಾದ ಶ್ರೀ.ಹೆಚ್. ಹನುಮಂತಪ್ಪರವರಿಗೆ ಮೇಲೆ (1)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಸಂಪುಟ ದರ್ಜೆ ಸಚಿವರ ಸ್ಥಾನಮಾನವನ್ನು ಸರ್ಕಾರವು ನೀಡಿದೆ. ಮಂಡಳಿಯ ಉಪಾಧ್ಯಕ್ಷರಿಗೆ ಮೇಲೆ (2)ರಲ್ಲಿ ಓದಲಾದ ದಿನಾಂಕ 17-06-2002 ರ ಸರ್ಕಾರಿ ಆದೇಶದನ್ವಯ ಸೌಲಭ್ಯಗಳನ್ನು ಯೋಜನಾ ಇಲಾಖೆಯು ಮಂಜೂರು ಮಾಡಿದೆ. ಯೋಜನಾ ಮಂಡಳಿಯ ಉಪಾಧ್ಯಕ್ಷರು ತಮಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನ ನೀಡಿರುವುದರಿಂದ ತಮಗೂ ಸಹ ಸಂಪುಟ ದರ್ಜೆ ಸಚಿವರಿಗೆ ನೀಡಿರುವಂತೆ ಆಪ್ತ ಸಿಬ್ಬಂದಿ ವರ್ಗದವರನ್ನು ನೀಡುವಂತೆ ಮೇಲೆ (3)ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ. ರಾಜ್ಯ ಯೋಜನಾ ಮಂಡಳಿಯು ಸರ್ಕಾರದ ಇತರೆ ನಿಗಮ ಮಂಡಳಿ ಇತ್ಯಾದಿಗಳಿಗಿಂತ ಭಿನ್ನವಾಗಿದ್ದು, ಈ ಯೋಜನಾ ಮಂಡಳಿಗೆ ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರು ಹಾಗೂ ಇತರೆ ಹಿರಿಯ ಸಚಿವರುಗಳು ಸದಸ್ಯರುಗಳಾಗಿರುವುದರಿಂದ ಈ ಮಂಡಳಿಗೆ ಹೆಚ್ಚಿನ ಸ್ಥಾನಮಾನವು ನೀಡುವ ಅಗತ್ಯವನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

:( ಆ ದೇ ಶ ):

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರ ಆಪ್ತ ಶಾಖೆಗೆ ಈ ಕೆಳಕಂಡಂತೆ 12 ವಿವಿಧ ದರ್ಜೆಯ ಹುದ್ದೆಗಳನ್ನು ಸರ್ಕಾರವು ಮಂಜೂರು ಮಾಡಿದೆ.

| | | | |
|---|---|---|---|
| 1) | ಆಪ್ತ ಕಾರ್ಯದರ್ಶಿ | - | 1 ಹುದ್ದೆ (ಒಂದು ಹುದ್ದೆ) |
| 2) | ಆಪ್ತ ಸಹಾಯಕರು | - | 4 ಹುದ್ದೆಗಳು (ನಾಲ್ಕು ಹುದ್ದೆಗಳು) |
| 3) | ಕನ್ನಡ ಶೀಘ್ರಲಿಪಿಗಾರರು | - | 1 ಹುದ್ದೆ (ಒಂದು ಹುದ್ದೆ) |
| 4) | "ಡಿ" ವೃಂದದ ನೌಕರರು | | 4 ಹುದ್ದೆಗಳು (ನಾಲ್ಕು ಹುದ್ದೆಗಳು) |
| 5) | ವಾಹನ ಚಾಲಕರು | - | 2 ಹುದ್ದೆಗಳು (ಎರಡು ಹುದ್ದೆಗಳು) |

......2ನೇ ಪುಟಕ್ಕೆ

ಮೇಲ್ಕಂಡ ಹುದ್ದೆಗಳನ್ನು ನಿಯೋಜನೆ ಮೇಲೆ ಅಥವ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಮಂಜೂರಾತಿಯನ್ನು ನೀಡಿದೆ.

ಈ ಬಗೆಗಿನ ವೆಚ್ಚವನ್ನು ರಾಜ್ಯ ಯೋಜನಾ ಮಂಡಳಿಯ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಯಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಆಇ:1619:ವೆಚ್ಚ7: 2002, ದಿನಾಂಕ 19-11 -2002ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಎಸ್. ಗಣಪತಿ)
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಸಿಆಸುಇ (ರಾಜ್ಯ ಶಿಷ್ಟಾಚಾರ)

ಇವರಿಗೆ:
1) ಮಹಾಲೇಖಪಾಲರು (ಎ ಅಂಡ್ ಇ) : (ಆಡಿಟ್ –1) : (ಆಡಿಟ್ –2), ಕರ್ನಾಟಕ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು
3) ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
4) ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸಚಿವಾಲಯ-2, ರೂಂ ನಂ.-121, 1ನೇ ಮಹಡಿ, "ಬಿ" ಬ್ಲಾಕ್, 2ನೇ ಹಂತ, ಬಹು ಮಹಡಿ ಕಟ್ಟಡ, ಬೆಂಗಳೂರು
5) ಸರ್ಕಾರದ ಅಧೀನ ಕಾರ್ಯದರ್ಶಿಗಳು-3, ಯೋಜನೆ ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ (ರಾಜ್ಯ ಯೋಜನಾ ಮಂಡಳಿ), ಬಹು ಮಹಡಿ ಕಟ್ಟಡ, ಬೆಂಗಳೂರು
6) ಆರ್ಥಿಕ ಇಲಾಖೆ (ವೆಚ್ಚ – 7)
7) ಶಾಖಾ ರಕ್ಷಾ ಕಡತಕ್ಕೆ : ಹೆಚ್ಚುವರಿ ಪ್ರತಿಗಳು.